ಜೊಲ್ಲೆ ಉದ್ಯೋಗ ಸಮೂಹ

ವಾರ್ತಾ ಪತ್ರ

(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

ಡಿಸೆಂಬರ 2019– ಸಂಪುಟ–4 ಸಂಚಿಕೆ– 04


# ದರ್ಪಣ



ಅಲ್ಲಮಪ್ರಭು ಸಿದ್ಧ ಸಂಸ್ಥಾನ ಮಠದ ಗಡಿ ಕನ್ನಡಿಗರ ಬಳಗ ಚಿಂಚಣಿ ವತಿಯಿಂದ ಆಯೋಜಿಸಿದ್ದ ರಾಜ್ಯೋತ್ಸವ ಮತ್ತು ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಜೊಲ್ಲೆ ದಂಪತಿಗಳನ್ನು ಸತ್ಕರಿಸುತ್ತಿರುವುದು

ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ)

ಕ್ರೀಯಾತ್ಮಕ ಹಾಗೂ ಪ್ರಗತಿಶೀಲ ಅರ್ಥವ್ಯವಸ್ಥೆ




### ಮಹಿಳಾ ಸಬಲೀಕರಣದ ಕನಸು ನನಸಾಗಿಸಿದ ಕರ್ನಾಟಕ ರಾಜ್ಯ ಸಚಿವರಾದ ಸೌ ಶಶಿಕಲಾ ಜೊಲ್ಲೆಯವರಿಗೆ

## ಕೋಟಿ–ಕೋಟಿ ಶುಭಾಷಯಗಳು

ಸಮಾಜಮುಖಿ ಕಾರ್ಯಗಳಿಗೆ ಸದಾ ಸಿದ್ಧರಿರುವ ಜೊಲ್ಲೆ ದಂಪತಿಗಳು ಗಡಿ ಭಾಗದ ಗಡಿದಾಟಿ ರಾಜ್ಯ ಮತ್ತು ರಾಷ್ಟ್ರದ ಸರ್ವಾಂಗೀಣ ಬೆಳವಣಿಗೆ ಹಾಗೂ ವಿಕಾಸಕ್ಕಾಗಿ ಹಗಲಿರುಳು ಶ್ರಮಿಸುತ್ತಿರುವುದು ಜನಮನ್ನಣೆ ಗಳಿಸುತ್ತಿರುವುದು, ಜನರ ನಾಡಿಮಿಡಿತ ಅರಿತಿರುವುದು ಅತ್ಯಂತ ಪ್ರಶಂಸನಿಯ ಸಂಗತಿಯಾಗಿದೆ. ಅನುಕ್ಷಣ–ಅನುದಿನ ಜನಸಾಮಾನ್ಯರ, ದುರ್ಬಲರ ಮತ್ತು ಮಹಿಳೆಯರ ಹಿತ ಚಿಂತನೆಗಳನ್ನು ಮಾಡಿ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಕ್ಷೇತ್ರಕ್ಕೆ ಅಪಾರ ಕೊಡುಗೆಗಳನ್ನು ನೀಡುತ್ತಿರುವ ಇವರ ವಿಶಿಷ್ಠ ವ್ಯಕ್ತಿತ್ವ ಗಡಿಭಾಗದ ಜನರಿಗೆ ಮಾದರಿಯಾಗಿದೆ. ಗಡಿಭಾಗದ ಜನರ ಒಳಿತಿಗಾಗಿ ಹಲವಾರು ಅತ್ಯುತ್ತಮ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸಿ ಜನರ ಮೊಗದಲ್ಲಿ ನಗೆಬುಗ್ಗೆ ಚಿಮ್ಮಿಸುತ್ತಿರುವ ಇವರು ಮನ–ಮನೆಗಳ ಆರಾಧ್ಯ ದೈವವಾಗಿದ್ದಾರೆ.

ರೈತರ, ಬಡವರ ಮತ್ತು ಮಹಿಳೆಯರ ಕಣ್ಣೀರ ಒರೆಸಿ ಅವರ ಬಾಳಿಗೆ ಬೆಳಕಾಗಿರುವ ಕರ್ನಾಟಕದ ಜನಪ್ರಿಯ ಸಚಿವರಾದ ಸೌ. ಶಶಿಕಲಾ ಜೊಲ್ಲೆಯವರು ನೆರೆಹಾವಳಿ ಹಾಗೂ ಕಷ್ಟಕ್ಕೀಡಾದ ಜನರಿಗೆ ಸಹಾಯ ಹಸ್ತ ನೀಡುವ ಮತ್ತು ಈ ಭಾಗದ ಎಲ್ಲ ಜನರ ದುಃಖ, ನೋವು, ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುವ ಸದುದ್ದೇಶದಿಂದ ಅತ್ಯಂತ ಸರಳವಾಗಿ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳಲು ತಿರ್ಮಾನಿಸಿ ಅದರಂತೆ ನಡೆದದ್ದು ಇವರು ಜನರ ಮೇಲಿಟ್ಟಿರುವ ಕಾಳಜಿಗೆ ಮತ್ತು ಅವರ ಮಾತೃಹೃದಯಕ್ಕೆ ಸತ್ಯ ನಿದರ್ಶನವಾಗಿದೆ. ಇಂತಹ ಮಹಾ ಮಾತೆಗೆ ಸಮಸ್ತ ಈ ಭಾಗದ ಜನರ ಹಾಗೂ ಕಾರ್ಮಿಕವರ್ಗದ ಪರವಾಗಿ ಕೋಟಿ–ಕೋಟಿ ಹುಟ್ಟುಹಬ್ಬದ ಶುಭಾಶಯಗಳು !

ಇವರಿಗೆ ಭಗವಂತ ಆಯುರಾರೋಗ್ಯ ನೀಡಿ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ, ಆಶೋತ್ತರಗಳಿಗೆ ಸ್ಪಂದಿಸುವ ಛಲ–ಬಲ ಹೆಚ್ಚಿಸಲೆಂದು ಆಶಿಸುತ್ತೇವೆ. ಆತ್ಮಶಕ್ತಿ–ಆತ್ಮವಿಶ್ವಾಸ ಮತ್ತು ಕ್ರಿಯಾಶೀಲತೆ ನೂರ್ಮಡಿಗೊಳ್ಳಲೆಂದು ಪ್ರಾರ್ಥಿಸುತ್ತೇವೆ. ಸರಳಸಜ್ಜನಿಕೆಯಲ್ಲಿ ಸಾತ್ವಿಕ ಬದುಕನ್ನು ಕಟ್ಟಿಕೊಂಡು ಸಮಾಜ ಸೇವೆಗೆ ತಮ್ಮನ್ನು ತಾವೇ ತೊಡಗಿಸಿಕೊಂಡು ಸದಾ ಜನಪರ ಧೋರಣೆಗಳು ಮತ್ತು ಯೋಜನೆಗಳನ್ನು ರೂಪಿಸಿ ಪೋಷಿಸುತ್ತಿರುವ ಇವರು ಜನರ ಮನಸ್ಸಿಗೆ ಹತ್ತಿರವಾಗಿದ್ದಾರೆ. ಉತ್ತಮ ಸಂಸ್ಕೃತಿ, ನಡೆ–ನುಡಿ, ಆಚಾರ–ವಿಚಾರ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಉನ್ನತೀಕರಣದ ಕನಸನ್ನು ನನಸಾಗಿಸುತ್ತಿರುವ ಇವರ ಬದುಕು ಪಾವನವಾಗಿದೆ.

ಮಹಿಳಾಸಬಲೀಕರಣದ ಧೇಯ್ಯೋದ್ದೇಶದೊಂದಿಗೆ ಹಲವು ವರ್ಷಗಳಿಂದ ಮಹಿಳಾ ಧ್ವನಿಯಾಗಿ ಮಹಿಳೆಯರ ಸರ್ವಾಂಗೀಣ ಬೆಳವಣಿಗೆ ಮತ್ತು ವಿಕಾಸಕ್ಕಾಗಿ ವಿವಿಧ ಜನಪರ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಿದ್ದಾರೆ. ಗುಡಿಕೈಗಾರಿಕೆ, ಉದ್ಯೋಗ, ಸಾಲಸೌಲಭ್ಯ, ಶಿಷ್ಯವೇತನ, ಪ್ರೋತ್ಸಾಹ ಧನ ಮತ್ತು ಹೀಗೆ ಇನ್ನು ಹಲವು ಸೌಲಭ್ಯಗಳನ್ನು ನೀಡುವ ಮೂಲಕ ಮಹಿಳೆಯರನ್ನು ಮುಖ್ಯವಾಹಿನಿಗೆ ಕೊಂಡೊಯ್ಯುವಲ್ಲಿ ಇವರ ಪಾತ್ರ ಹಿರಿದಾಗಿದೆ. ಸರಳ ಸಜ್ಜನಿಕೆ, ಸರ್ವರಲ್ಲೂ ಬೆರೆಯುವ, ಪರಸ್ಪರ ಭಾವನೆಗಳನ್ನು ಹಂಚಿಕೊಳ್ಳುವ ಸುಖ ದುಃಖಗಳಿಗೆ ಸ್ಪಂದನೆ ನೀಡುವ ಇವರ ಹಿರಿಗುಣವನ್ನು ಮೆಚ್ಚಲೇಬೇಕು. ಮಾತು, ಕೃತಿಯಲ್ಲಿ ಸಮತೋಲನತೆ ಇವೆಲ್ಲ ಸಾಧನೆಗೆ ಕಳಶ ಪ್ರಾಯವಾಗಿದೆ.

ಸಹಕಾರ ಶಿಕ್ಷಣ ಮತ್ತು ಸಮಾಜ ಸೇವೆ ಮತ್ತು ರಾಜಕೀಯ ಸೇವೆಗಳನ್ನು ಸಮನ್ವಯಗೊಳಿಸಿರುವ ಅಪರೂಪದ ವ್ಯಕ್ತಿತ್ವ ಇವರದ್ದಾಗಿದೆ. ದಲಿತರು, ದುರ್ಬಲರು, ಬಡವರು, ಮಹಿಳೆಯರು, ಕಾರ್ಮಿಕರಿಗೆ ಮಾನವೀಯ ಮೌಲ್ಯಗಳನ್ನು ಧಾರೆಯೆರೆಯುತ್ತಿದ್ದಾರೆ ಎಂಬುದು ನಮಗೆ ತೃಪ್ತಿ ತರುವ ವಿಚಾರವಾಗಿದೆ. ಪ್ರತಿಯೊಬ್ಬರ ಬದುಕಿನಲ್ಲಿ ವಿಶ್ವಾಸ ಚಿಗುರಿಸುತ್ತಿರುವ ಇವರು ನಮ್ಮೆಲ್ಲರಿಗೆ ಪ್ರೇರಕ ಶಕ್ತಿಯಾಗಿದ್ದಾರೆ.

ಭವ್ಯಭಾರತದಲ್ಲಿ ಗೌರವ, ಭಕ್ತಿ, ಶಕ್ತಿ ಹಾಗೂ ಸಂಸ್ಕೃತಿ, ನಾಗರಿಕತೆಗೆ ಮಾನವೀಯ ಮೌಲ್ಯಗಳಿಗೆ ಪ್ರತೀಕವಾಗಿರುವ ಮಹಿಳೆ ಸದಾ ತನ್ನ ಒಳಿತನ್ನು ಅಲ್ಲಗಳೆದು ಪರರ ಹಿತ ಚಿಂತನೆಗಳನ್ನು ಮಾಡುವಲ್ಲಿಯೇ ತನ್ನ ಒಳಿತನ್ನು ಕಾಣುತ್ತಿರುವ ಹಾಗೇಯೇ ಸೌ. ಶಶಿಕಲಾ ಜೊಲ್ಲೆಯವರು "ಸರ್ವೇಜನ ಸುಖಿನೋ ಭವಂತು" ನಾನ್ನುಡಿಯುನ್ನು ತಮ್ಮ ಜೀವನದಲ್ಲಿ ಹಾಸುಹೊಕ್ಕಾಗಿಸಿಕೊಂಡು ಬರುತ್ತಿರುವುದು ನಮಗೆ ಹೆಮ್ಮೆಯ ಸಂಗತಿಯಾಗಿದೆ.

ಬದುಕಿನಲ್ಲಿ ಆಶೆಗಳನ್ನು ಕಳೆದುಕೊಂಡು ಬದುಕುತ್ತಿರುವ ಮಹಿಳೆಯರಿಗೆ ಆಶಾಜ್ಯೋತಿಯಾಗಿ, ಸಮರ್ಥ ನಾಯಕಿಯಾಗಿ ಮಹಿಳಾ ಸಬಲೀಕರಣಕ್ಕಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟಿರುವ ಸೌ. ಶಶಿಕಲಾ ಜೊಲ್ಲೆಯವರ ಬದುಕು ನಿತ್ಯ ಹರಿದ್ವರ್ಣವಾಗಿದೆ. ತೇಗ–ಗಂಧ ತರುವಾಗಲೆಂದು ಆಶಿಸುತ್ತೇವೆ. ತಮಗೆ ಸರ್ವ ಕಾರ್ಮಿಕವರ್ಗದ ಪರವಾಗಿ ಕೋಟಿ–ಕೋಟಿ ಶುಭಾಷಯಗಳು

ಬಾಬಾಸಾಹೇಬ ಆರ್. ಕಾಮನಗೋಳ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ

ಯಕ್ಸಂಬಾದ ಶಿಶಂಕರ ಜೊಲ್ಲೆ ಕನ್ನಡ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ

# 64 ನೇ ಕರ್ನಾಟಕ ರಾಜ್ಯೋತ್ಸವ





ಸಹಕಾರ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆಯ ಅಂಗ ಸಂಸ್ಥೆಯಾದ ಶಿವಶಂಕರ ಜೊಲ್ಲೆ ಕನ್ನಡ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ 64 ನೇ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಜೊಲ್ಲೆ ಉದ್ಯೋಗ ಸಮೂಹದ ಪ್ರೇರಣಾ ಶಕ್ತಿ ಹಾಗೂ ಆಶಾ ಜ್ಯೋತಿ ವಿಶೇಷ ಮಕ್ಕಳ ವಸತಿ ಶಾಲೆಯ ಅಧ್ಯಕ್ಷರಾದ ಕು. ಜ್ಯೋತಿಪ್ರಸಾದ ಅ. ಜೊಲ್ಲೆ ಯವರು ವಹಿಸಿಕೊಂಡು, ಭುವನೇಶ್ವರಿ ಮಾತೆಯ ಭಾವಚಿತ್ರಕ್ಕೆ ಪೂಜೆ ಹಾಗೂ ಧ್ವಜಾರೋಹಣ ನೇರವೇರಿಸಿಕೊಟ್ಟರು.

ಶಾಲೆಯ ಸಹಶಿಕ್ಷಕಿಯಾದ ಶ್ರೀಮತಿ. ವ್ಹಿ. ಟಿ. ಸನದಿ ಮಾತನಾಡಿ "ಕನ್ನಡ ನಾಡು-ನುಡಿ, ಆಚಾರ-ವಿಚಾರ ಶ್ರೇಷ್ಠವಾದದ್ದು ಅದನ್ನು ಕನ್ನಡಿಗರು ತಮ್ಮಲ್ಲಿ ಅಳವಡಿಸಿಕೊಂಡು ಸಾವಿರಾರು ಭಾಷೆಗಳನ್ನು ಕಲಿತರು ಕೂಡಾ ಕನ್ನಡದ ಭಾಷಾಭಿಮಾನ ಎಲ್ಲರಲ್ಲಿ ಇರಬೇಕು" ಎಂದು ತಿಳಿಸಿದರು.

ಶಾಲೆಯ ಪ್ರಧಾನಗುರುಗಳಾದ ಶ್ರೀ. ವ್ಹಿ. ಆರ್. ಭಿವಸೆ ಅವರು "ಕನ್ನಡ ಭಾಷೆಯು 2000ಕ್ಕೂ ಹೆಚ್ಚು ವರ್ಷಗಳ ಇತಿಹಾಸವನ್ನು ಹೊಂದಿದ್ದು ಅದು ಭಾರತ ದೇಶದಲ್ಲಿ ಕನ್ನಡ ನಾಡಿನ ಸಂಸ್ಕೃತಿ ಹಾಗೂ ಭಾಷೆಯ ವೈಶಿಷ್ಟ್ಯತೆಯಿಂದ ಕೂಡಿದೆ" ಎಂದು ತಿಳಿಸಿದರು.

ಶಾಲೆಯ ಮಕ್ಕಳಿಂದ ಕರ್ನಾಟಕದ ಜನಪದ ಕಲೆಗಳ ವೈಭವವನ್ನು ಸಾರುವ ನೃತ್ಯಗಳ ಪ್ರದರ್ಶನ ಹಾಗೂ ಕನ್ನಡ ಭಾಷೆಯ ಮಹತ್ವವನ್ನು ಸಾರುವ ಘೋಷಣೆಗಳನ್ನು ಕುಗೂವುದರ ಮೂಲಕ ಊರಿನ ಪ್ರಮುಖ ಬೀದಿಗಳಲ್ಲಿ ಜಾಥಾ ಜರುಗಿಸಲಾಯಿತು. ಅದೇ ರೀತಿ ಕ್ರೀಡೆಯಲ್ಲಿ ವಲಯ, ತಾಲೂಕಾ, ಜಿಲ್ಲೆ ಹಾಗೂ ರಾಜ್ಯಮಟ್ಟದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ಹಾಗೂ ನೆನಪಿನ ಕಾಣಿಕೆಗಳನ್ನು ವಿತರಿಸಲಾಯಿತು.

ಈ ಕಾರ್ಯಕ್ರಮಕ್ಕೆ ಆಡಳಿತ ಮಂಡಳಿಯ ಸದಸ್ಯರಾದ ಮಂಗಲ ಜೊಲ್ಲೆ, ಅನುಸಯಾ ಪಾಟೀಲ, ಶಾಂತಾಬಾಯಿ ಕರ್ನಾಟಕೆ, ಸವಿತಾ ಜಾಧವ, ಬಾಳವ್ವಾ ನಾಯಿಕ, ಫೈಮಿದಾ ದಾಡಿವಾಲೆ ಹಾಗೂ ಲಕ್ಷ್ಮೀಬಾಯಿ ಮೇತ್ರೆ ಹಾಗೂ ಪೂರ್ವ ಪ್ರಾಥಮಿಕ ವಿಭಾಗದ ಪ್ರಧಾನಗುರು ಮಾತೆಯರಾದ ಎಸ್. ಜಿ. ಕಾಮತ ಹಾಗೂ ಎಲ್ಲ ಶಿಕ್ಷಕ/ಕಿಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ಕು.ಅಭಿಜೀತ ಪೂಜಾರಿ ಸ್ವಾಗತಿಸಿದರು. ಕು.ಸುಹಾನ ತಾಂಬೂಳಿ ವಂದಿಸಿದರು, ಕು.ಚೇತನ ನಿಡಗುಂದೆ ನಿರೂಪಿಸಿದರು.

---

ನಣದಿಯ ಶಿವಶಂಕರ ಜೊಲ್ಲೆ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆ(ಸಿ.ಬಿ.ಎಸ್.ಇ)ಯಲ್ಲಿ

# ರಾಷ್ಟ್ರೀಯ ಏಕತಾ ದಿನಾಚರಣೆ



ಶಿವಶಂಕರ ಜೊಲ್ಲೆ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆ(ಸಿ.ಬಿ.ಎಸ್.ಇ),ನಣದಿ ಕ್ಯಾಂಪಸ್‌ನಲ್ಲಿ ಸರ್ದಾರ್ ವಲ್ಲಭ್‌ಭಾಯಿ ಪಟೇಲ ಅವರ 144ನೇ ಜನ್ಮದಿನದ ಅಂಗವಾಗಿ ರಾಷ್ಟ್ರೀಯ ಏಕತಾ ದಿನವನ್ನು ಆಚರಿಸಲಾಯಿತು. ಶಿಕ್ಷಕಿ ವಾಣಿಶ್ರೀ ಹೆಗರೆ ಅವರು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜೀವನ ಹಾಗೂ ಸಾಧನೆಗಳನ್ನು ಕುರಿತು ಮಾತನಾಡುತ್ತ, "ಭಾರತದ ಸಂಸ್ಥಾನಗಳ ವಿಲೀನಿಕರಣದಲ್ಲಿ ಉಕ್ಕಿನ ಮನುಷ್ಯರಾದ ಸರ್ದಾರಜೀ ಅವರ ಪಾತ್ರ ಅಮೋಘವಾಗಿದೆ. ಭಾರತದ ಏಕತೆ ಹಾಗೂ ಸಮಗ್ರತೆಯನ್ನು ಕಾಪಾಡುವುದಕ್ಕಾಗಿ ಸರ್ದಾಜೀಯವರು ಹಗಲಿರುಳು ಶ್ರಮಿಸಿದ್ದಾರೆ. ಭಾರತೀಯರಾದ ನಾವು ಯಾವುದೇ ಭೇದ ಭಾವಗಳಿಗೆ ಅವಕಾಶವನ್ನು ಕೊಡದೇ ರಾಷ್ಟ್ರದ ಹಿತಸಕ್ತಿಗಾಗಿ ಒಮ್ಮನಸಿನಿಂದ ಕಾರ್ಯೋನ್ಮುಖವಾಗಬೇಕಾಗಿದೆ. ಸರ್ದಾಜೀಯವರ ಆದರ್ಶಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಕರೆ ನೀಡಿದರು."

ಇದೇ ಸಂದರ್ಭಲ್ಲಿ ವಿದ್ಯಾರ್ಥಿಗಳು ದೇಶಭಕ್ತಿ ಗೀತೆ, ಭಾಷಣ, ನೃತ್ಯವನ್ನು ಪ್ರದರ್ಶಿಸಿದರು. ವಿದ್ಯಾರ್ಥಿಗಳಾದ ಕು. ಪ್ರತಿಕ್ಷಾ ಮಿರ್ಜೆ ಕಾರ್ಯಕ್ರಮ ನಿರೂಪಿಸಿದರು. ಕು. ತೇಜಸ್ವಿನಿ ದುಂಡಗೆ ಸ್ವಾಗತಿಸಿದರು. ಕು. ವಿನಾಯಕ ಅವಟೆ ವಂದಿಸಿದರು. ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಗೀತಾ ನಾಯ್ಡು, ಉಪಪ್ರಾಚಾರ್ಯರಾದ ಉರ್ಮಿಳಾ ಚೌಗುಲೆ, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಮಕ್ಕಳ ದಿನಾಚರಣೆ



ಶಿವಶಂಕರ ಜೊಲ್ಲೆ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆ(ಸಿ.ಬಿ.ಎಸ್.ಇ), ನಣದಿ ಕ್ಯಾಂಪಸ್ ಸಭಾ ಭವನದಲ್ಲಿ ಮಕ್ಕಳ ದಿನಾಚರಣೆಯನ್ನು ಆಶಾಜ್ಯೋತಿ ವಿಶೇಷ ಮಕ್ಕಳ ವಸತಿ ಶಾಲೆಯ ಅಧ್ಯಕ್ಷರಾದ ಕು. ಜ್ಯೋತಿಪ್ರಸಾದ ಜೊಲ್ಲೆಯವರ ನೇತೃತ್ವದಲ್ಲಿ ಅತೀ ಸಡಗರದಿಂದ ಆಚರಿಸಲಾಯಿತು.

ಪ್ರಾಚಾರ್ಯರಾದ ಗೀತಾ ನಾಯ್ಡು ಅವರು ಪಂಡಿತ ಜವಾಹರಲಾಲ್ ನೆಹರು ಅವರ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸಿ ಮಾತನಾಡುತ್ತ, "ನೆಹರು ಅವರು ನಮ್ಮ ದೇಶ ಕಂಡ ಶ್ರೇಷ್ಠ ರಾಜಕಾರಣಿಗಳಲ್ಲಿ ಒಬ್ಬರು. ಅವರು ಮಕ್ಕಳು ಹಾಗೂ ದೇಶದ ಬಗ್ಗೆ ವಿಶೇಷವಾದ ಅಭಿಮಾನವನ್ನು ಇಟ್ಟುಕೊಂಡಿದ್ದರು. ಸ್ವಾತಂತ್ರ್ಯ ಹೋರಾಟಗಾರರಾದ ಅವರು ಒಬ್ಬ ಶ್ರೇಷ್ಠ ಬರಹಗಾರರು ಆಗಿದ್ದರು. ಮಕ್ಕಳೊಂದಿಗೆ ಅನ್ಯೋನ್ಯವಾದ ಸಂಬಂಧವನ್ನು ಹೊಂದಿದ ಅವರ ಜನ್ಮದಿನವನ್ನು ಮಕ್ಕಳ ದಿನವನ್ನಾಗಿ ಆಚರಿಸುತ್ತಿರುವುದು ವಿಶೇಷ ಸಂಗತಿಯಾಗಿದೆ. ಪ್ರಚಲಿತ ದಿನಮಾನಗಳಲ್ಲಿ ವಿದ್ಯಾರ್ಥಿಗಳು ಓದಿನ ಕಡೆಗೆ ಹೆಚ್ಚು ಗಮನವನ್ನು ಹರಿಸಬೇಕು. ಶೈಕ್ಷಣಿಕ ಸಾಧನೆಗಾಗಿ ತಂತ್ರಜ್ಞಾನದ ಬಳಕೆಯನ್ನು ವ್ಯವಸ್ಥಿತವಾಗಿ ಮಾಡಿಕೊಳ್ಳಬೇಕು" ಎಂದರು.

ಶಿಕ್ಷಕ ವರ್ಗದವರು ನೃತ್ಯ, ಗಾಯನ, ಕಿರುನಾಟಕ, ಹಾಸ್ಯ, ಏಕಪಾತ್ರಾಭಿನಯ, ಜನಪದ ಕಲೆ ಮುಂತಾದವುಗಳನ್ನು ಪ್ರದರ್ಶಿಸುವುದರ ಮೂಲಕ ಮಕ್ಕಳನ್ನು ರಂಜಿಸಿದರು. ಎಲ್ಲ ಮಕ್ಕಳಿಗೆ ಕಿರು ಕಾಣಿಕೆಗಳನ್ನು ನೀಡಲಾಯಿತು. ಮಕ್ಕಳಿಗಾಗಿ ಸಹಭೋಜನ ಕೂಟವನ್ನು ಏರ್ಪಡಿಸಲಾಗಿತ್ತು.

ನಿರ್ದೇಶಕರಾದ ಶಂಕರ ಶಾಹೀರ, ಉಪಪ್ರಾಚಾರ್ಯರಾದ ಊರ್ಮಿಳಾ ಚೌಗುಲೆ, ಮಹಾದೇವ ಪಾಟೀಲ, ರಿಯಾಜ ಮುಲ್ಲಾ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಶಿಕ್ಷಕರಾದ ರಾಜು ಪವಾರ ಸ್ವಾಗತಿಸಿದರು. ನಿತೀನ ಕೋರೆ ವಂದಿಸಿದರು. ವಸಂತ ಹವಾಲ್ದಾರ ಹಾಗೂ ಆಕಾಶ ಮಾಯನ್ನವರ ಅವರು ಕಾರ್ಯಕ್ರಮ ನಿರೂಪಣೆಯನ್ನು ಮಾಡಿದರು.

# ಕನಕದಾಸ ಜಯಂತಿ

ಶಿವಶಂಕರ ಜೊಲ್ಲೆ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆ(ಸಿ.ಬಿ.ಎಸ್.ಇ), ನಣದಿ ಕ್ಯಾಂಪಸ್‌ನಲ್ಲಿ ಕನಕದಾಸ ಜಯಂತಿಯನ್ನು ಅತೀ ವಿಜೃಂಭಣೆಯಿಂದ ಆಚರಿಸಲಾಯಿತು. ಪ್ರಾಚಾರ್ಯರಾದ ಗೀತಾ ನಾಯ್ಡು ಅವರು ಸಂತ ಕನಕದಾಸರ ಭಾವ ಚಿತ್ರಕ್ಕೆ ಪೂಜೆಯನ್ನು ಸಲ್ಲಿಸಿ ಮಾತನಾಡುತ್ತ, "ಜೀವನದ ಸಾಕ್ಷಾತ್ಕಾರಕ್ಕಾಗಿ ಸತ್ಯ, ಶಾಂತಿ, ಧರ್ಮ, ಪ್ರೀತಿ ಹಾಗೂ ಅಹಿಂಸೆಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅರಿಷಡ್ವರ್ಗಗಳನ್ನು ನಿಗ್ರಹಿಸುವುದರ ಮೂಲಕ ಸಾಧನೆಯ ಉತ್ತುಂಗವನ್ನು ಮುಟ್ಟಬಹುದು. ನಾವು ನಮ್ಮ ಆಸೆ ಆಕಾಂಕ್ಷೆಗಳಿಗೆ ಸಾಧ್ಯವಿದ್ದಷ್ಟು ಕಡಿವಾಣಗಳನ್ನು ಹಾಕಬೇಕು. ಅಹಂ ಮನೋಭಾವನೆಗಳನ್ನು ತೊರೆದು ಜೀವನದಲ್ಲಿ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು" ಎಂದರು.

ಶಿಕ್ಷಕರಾದ ವಸಂತ ಹವಾಲ್ದಾರ ಅವರು ಮಾತನಾಡುತ್ತ, "ಕನಕದಾಸರು ನಮ್ಮ ನಾಡು ಕಂಡ ಶ್ರೇಷ್ಠ ಸಂತರಲ್ಲಿ ಒಬ್ಬರು. ತಮ್ಮ ಜೀವನವನ್ನು ಜನಮನದ ಕತ್ತಲೆಯನ್ನು ಕಳೆಯುವುದಕ್ಕಾಗಿ ಮೀಸಲಾಗಿಟ್ಟಿದ್ದರು. ಸಮಾಜದಲ್ಲಿರುವ ಎಲ್ಲ ಅನಿಷ್ಟಗಳ ವಿರುದ್ಧ ಧ್ವನಿ ಎತ್ತಿದ್ದಾರೆ. ಶ್ರೇಷ್ಠ ಕವಿಯಾಗಿ ಅತ್ಯಮೂಲ್ಯ ಕೃತಿಗಳನ್ನು ರಚಿಸುವುದರ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಕನಕದಾಸರ ತತ್ವಗಳು ಹಾಗೂ ಜೀವನಾದರ್ಶಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು".

ಶಿಕ್ಷಕರಾದ ಉತ್ಕರ್ಷ ಸಮಾಜೆ ಹಾಗೂ ಅಮೃತಾ ಗೊಂದಳಿ ಕಾರ್ಯಕ್ರಮವನ್ನು ನಿರೂಪಿಸಿದರು. ಧನಂಜಯ ಥೋರಾತ ಸ್ವಾಗತಿಸಿದರು. ವಾಣಿಶ್ರೀ ಹೆಗರೆ ವಂದಿಸಿದರು.

ಕಾರ್ಯಕ್ರಮದಲ್ಲಿ ಉಪಪ್ರಾಚಾರ್ಯರಾದ ಊರ್ಮಿಳಾ ಚೌಗುಲೆ, ಮಹಾದೇವ ಪಾಟೀಲ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ರೈತಣ್ಣ

ಜಗಕೆ ಅನ್ನ ನೀಡುವ ಅಣ್ಣ ರೈತಣ್ಣ
ಜಗದ ಹಸಿರು, ಉಸಿರು ನೀನಣ್ಣ
ನೀ ಬಾಳಬೇಕಣ್ಣ, ನೀ ಬಾಳಬೇಕಣ್ಣ
ಸಮೃದ್ಧಿಯ ಬೆಳೆ ಬೆಳೆಯಬೇಕಣ್ಣ
ಆತ್ಮ ಹತ್ಯೆ ಸಾವಿನ ಮಾತೆಕಣ್ಣ
ನಿನ್ನ ಸಾವಿಗೆ ಬೆವರಿಗೆ....!
ಬೆಲೆ ಕಟ್ಟಲು ಸಾಧ್ಯವೇಸಣ್ಣ
ನಾಡಿನ "ನಾಡಿ" ಕಾಡಿನ ಸಿರಿ ಸೊಬಗು ನೀನಣ್ಣ.

ಭ್ರಷ್ಟಾಚಾರಿಗಳು, ಬೀದಿಕಾಮಣ್ಣರು
ಮೇವು, ರೊಕ್ಕ, ಮಣ್ಣು ತಿಂದವರು
ಅಮಾನವೀಯತೆ ಮೆರೆದವರು !
ಹೆದರದೆ, ಬೆದರದೆ ಎದೆಉಬ್ಬಿಸಿ
ಸಭ್ಯರಂತೆ ಮೆರೆಯುತ್ತಿರುವಾಗ
ನೀನೇಕೆ ಸಾಯಬೇಕಣ್ಣ ?
ಆತ್ಮಹತ್ಯೆಯ ಮಾತೇಕಣ್ಣ ?

ರಟ್ಟೆಯಲ್ಲಿ ಬಲವಿದೆ, ಮನದಲ್ಲಿ ಛಲವಿದೆ
ಉತ್ತಿ-ಬಿತ್ತಿ ಬೆಳೆ ಬೆಳೆಯುವ ಹಮ್ಮು ಬಿಮ್ಮು ಇದೆ
ಸ್ಫಟಿಕದಂತಹ, ಅಪ್ಪಟಚಿನ್ನದಂತಹ ಮನವಿದೆ
ವಜ್ರದಂತಹ ಗಟ್ಟಿ ತನುವಿದೆ
ಏಕೆ ? ಇನ್ನೇಕೆ ? ಅವಮಾನದ ಅನುಮಾನ ?
ಏಳು, ಎದ್ದೇಳು ರೈತನ್ನ ಕಾದಿದೆ ಸನ್ಮಾನ.

ಈ ನೆಲ ಜಲ ಆಸ್ತಿ ಅಂತಸ್ತು ನಿನ್ನದೆ
ಒಂದಿದ್ದರೆ ಸಾಕು ಬದುಕುವ ಕೆಚ್ಚೆದೆ !
ಆತ್ಮಬಲ, ಆತ್ಮವಿಶ್ವಾಸ, ಆತ್ಮ ಸ್ಥೈರ್ಯ ನಿನ್ನಲ್ಲಿದ್ದರೆ
ಅಳುವನ್ನಳಿಸಿ ಜಗತ್ತನ್ನೇ ಆಳುವೆ
ಓ ಅಣ್ಣ ಅನ್ನ ನೀಡುವ ರೈತಣ್ಣ !
ತಾಳಬೇಕಣ್ಣ ಬಾಳಬೇಕಣ್ಣ ಜಗದ ಕಣ್ಣಾಗಬೇಕಣ್ಣ !!

ಪ್ರೊ. ಬಾಬಾಸಾಹೇಬ ಆರ್. ಕಾಮನಗೋಳ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ




## ಹಳ್ಳೂರ ಶಾಖೆ ಉದ್ಘಾಟನೆ



## ಹಂದಿಗುಂದ ಶಾಖೆ ಉದ್ಘಾಟನೆ

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ, ಶಾಖೆ ಹಳ್ಳೂರ ಹಾಗೂ ಹಂದಿಗುಂದ ನೂತನ ಶಾಖೆಯ ಉದ್ಘಾಟನೆಯನ್ನು ಪರಮಾನಂದವಾಡಿ ಶ್ರೀ ಗುರುದೇವ ಬ್ರಹ್ಮಾನಂದ ಆಶ್ರಮದ ಚಿನ್ಮಯ ಚೇತನ ಪ.ಪೂ. ಶ್ರೀ. ಸದ್ಗುರು ಡಾ॥ ಅಭಿನವ ಬ್ರಹ್ಮಾನಂದ ಮಹಾಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ ಸಸಿಗೆ ನಿರೆರೆಯುವ ಮೂಲಕ ಆಶಾಜ್ಯೋತಿ ವಿಶೇಷ ಮಕ್ಕಳ ವಸತಿ ಶಾಲೆಯ ಅಧ್ಯಕ್ಷರು ಕು. ಜ್ಯೋತಿಪ್ರಸಾದ ಜೊಲ್ಲೆ ಯವರು ಉದ್ಘಾಟಿಸುತ್ತಿರುವುದು.



## ನೆನಪಿನ ಕಾಣಿಕೆ ನೀಡುತ್ತಿರುವುದು

ಕನಕದಾಸರ ಜಯಂತಿಯಂದು ಮಾನ್ಯ ರಾಷ್ಟ್ರಪತಿ ಯವರಿಗೆ ಗಣಿ ಇದ್ದಿಲು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ. ಪ್ರಹ್ಲಾದ ಜೋಶಿ ಹಾಗೂ ಚಿಕ್ಕೋಡಿ ಲೋಕಸಭೆಯ ಸದಸ್ಯರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಯವರು ಕನಕದಾಸರ ಭಾವಚಿತ್ರದ ನೆನಪಿನ ಕಾಣಿಕೆ ನೀಡುತ್ತಿರುವುದು.



## ಚೆಕ್ ವಿತರಣೆ

ಆಶಾಜ್ಯೋತಿ ವಿಶೇಷ ಮಕ್ಕಳ ವಸತಿ ಶಾಲೆಯ ಅಧ್ಯಕ್ಷರಾದ ಕು. ಜ್ಯೋತಿಪ್ರಸಾದ ಜೊಲ್ಲೆಯವರು ಯಕ್ಸಂಬಾ ಗ್ರಾಮದ ಲಕ್ಷ್ಮೀಬಾಯಿ ಧೋಂಡಿಬಾ ಪೋಳ ಅವರ ವೈದ್ಯಕೀಯ ಚಿಕಿತ್ಸೆ ಸಲುವಾಗಿ ಅವರ ಸುಪುತ್ರನಿಗೆ 25000 ರೂ ಗಳ ಪರಿಹಾರ ಧನದ ಚೆಕ್ಕನ್ನು ವಿತರಿಸುತ್ತಿರುವುದು.



## "ಸಹಕಾರ ಸಪ್ತಾಹ" ದಿನಾಚರಣೆ

ಸಹಕಾರ ಸಪ್ತಾಹದ ಅಂಗವಾಗಿ ಸಹಕಾರದ ಜನಕರಾದ ಶ್ರೀ. ಸಿದ್ದನಗೌಡಾ ಎಸ್. ಪಾಟೀಲ ಇವರ ಭಾವಚಿತ್ರಕ್ಕೆ ಪೂಜೆ ಹಾಗೂ ಸಹಕಾರ ಧ್ವಜಾರೋಹಣವನ್ನು ಆಶಾಜ್ಯೋತಿ ವಿಶೇಷ ಮಕ್ಕಳ ವಸತಿ ಶಾಲೆಯ ಅಧ್ಯಕ್ಷರಾದ ಕು. ಜ್ಯೋತಿಪ್ರಸಾದ ಜೊಲ್ಲೆ ಹಾಗೂ ಜ್ಯೋತಿ ಸೋಸಾಯಿಟಿಯ ನಿರ್ದೇಶಕರಾದ ಕಲ್ಲಪ್ಪ ಜಾಧವ ರವರು ನೆರವೇರಿಸುತ್ತಿರುವುದು.



## ಭಾಗ್ಯಲಕ್ಷ್ಮೀ ಬಾಂಡ ವಿತರಣೆ

ಮಾನ್ಯ ಸಚಿವರಾದ ಸೌ. ಶಶಿಕಲಾ ಜೊಲ್ಲೆಯವರು ನಿಪ್ಪಾಣಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶೆಂಡುರು, ಶಿರಗುಪ್ಪಿ ಮತ್ತು ಪಾಂಗೇರಿ ಗ್ರಾಮಗಳ ಫಲಾನುಭವಿಗಳಿಗೆ "ಭಾಗ್ಯಲಕ್ಷ್ಮೀ" ಯೋಜನೆಯಡಿ ಭಾಗ್ಯಲಕ್ಷ್ಮಿ ಬಾಂಡ ವಿತರಿಸುತ್ತಿರುವುದು.




## ಬೂದಿಹಾಳ ಶಾಖೆ ಉದ್ಘಾಟನೆ

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ, ಶಾಖೆ ಬೂದಿಹಾಳ ನೂತನ ಶಾಖೆಯ ಉದ್ಘಾಟನೆಯನ್ನು ಪ.ಪೂ. ಶ್ರೀ. ಪ್ರಾಣಲಿಂಗ ಮಹಾಸ್ವಾಮೀಗಳು ಸಮಾಧಿಮಠ, ನಿಪ್ಪಾಣಿ ಇವರ ದಿವ್ಯ ಸಾನಿಧ್ಯದಲ್ಲಿ ಸಸಿಗೆ ನೀರೆರೆಯುವ ಮೂಲಕ ಆಶಾಜ್ಯೋತಿ ವಿಶೇಷ ಮಕ್ಕಳ ವಸತಿ ಶಾಲೆಯ ಅಧ್ಯಕ್ಷರು ಕು. ಜ್ಯೋತಿಪ್ರಸಾದ ಜೊಲ್ಲೆ ಯವರು ಉದ್ಘಾಟಿಸುತ್ತಿರುವುದು.



## ಕರ್ನಾಟಕ ರಾಜ್ಯೋತ್ಸವ

ಶಿವಶಂಕರ ಜೊಲ್ಲೆ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆ(ಸಿ.ಬಿ.ಎಸ್.ಇ), ನಣದಿ ಕ್ಯಾಂಪಸ್‌ನಲ್ಲಿ 64ನೇ ಕರ್ನಾಟಕ ರಾಜ್ಯೋತ್ಸವದ ನಿಮಿತ್ಯ ಆಶಾಜ್ಯೋತಿ ವಿಶೇಷ ಮಕ್ಕಳ ವಸತಿ ಶಾಲೆಯ ಅಧ್ಯಕ್ಷರಾದ ಕು. ಜ್ಯೋತಿಪ್ರಸಾದ ಜೊಲ್ಲೆಯವರು ಭುವನೇಶ್ವರಿಯ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸುತ್ತಿರುವುದು.



## ಕುಲಗೋಡ ಶಾಖೆ ಉದ್ಘಾಟನೆ

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ, ಶಾಖೆ ಕುಲಗೋಡ ನೂತನ ಶಾಖೆಯ ಉದ್ಘಾಟನೆಯನ್ನು ಸುಣದೊಳ್ಳಿ ಜಡಿಸಿದ್ದೇಶ್ವರ ಮಠದ ಶ್ರೀ. ಮ.ನಿ.ಪ್ರ. ಶಿವಾನಂದ ಮಹಾಸ್ವಾಮೀಜಿಯವರ ಉದ್ಘಾಟಿಸುತ್ತಿರುವುದು.



## ಹನುಮಮಾಲಾ ಕಾರ್ಯಕ್ರಮ

ಡಿಸೆಂಬರ 7 ರಿಂದ 9ರ ವರೆಗೆ ನಡೆಯಲಿರುವ ಹನುಮಮಾಲಾ ಅಭಿಯಾನದ ನೊಂದಣಿ ಹಾಗೂ ಪ್ರಚಾರಾರ್ಥವಾಗಿ ಬಸವಜ್ಯೋತಿ ಯುಥ್ ಪೌಂಡೇಶನ ಅಧ್ಯಕ್ಷರಾದ ಕು. ಬಸವಪ್ರಸಾದ ಜೊಲ್ಲೆ ಯವರು ಎಲ್ಲ ಯುವಕರಿಗೆ ಕರೆ ನೀಡಿ ತಾವು ಹನುಮಮಾಲೆ ಧರಿಸಲಿದ್ದು ಎಲ್ಲರೂ ಹನುಮಮಾಲೆ ಧರಿಸಿ ಹನುಮಂತನ ಕೃಪೆಗೆ ಪಾತ್ರರಾಗೋಣ ಎಂದು ಕರೆ ನೀಡೀದರು.